# ಏನ ಪೇಳಲೆ ಗೋಪಿ ನಿನ್ನ ಮಗನ ಜಾಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 129.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 115.
3. **Note:** Lyrics given here are as per Ref. 1. The wordings in Ref. 2 are similar to Ref. 1. The singer has followed these lyrics.

ರಾಗ: ಆನಂದ ಭೈರವಿ ತಾಳ: ಛಾಪು

ಏನ ಪೇಳಲೆ ಗೋಪಿ ನಿನ್ನ ಮಗನ ಜಾಲ
ಮಾನ ತಪ್ಪಿ ಬಂದ ಮನೆಯೊಳಗೆ || ಪ ||

ಕೊಡ ಹಾಲು ಕುಡಿದನೆ ಗಡಿಗೆಯನೊಡೆದನೆ
ಅಡಗಿದ್ದನೆ ದೊಡ್ಡ ಕೊಡದೊಳಗೆ
ಹುಡುಗ ಸಿಕ್ಕಿದನೆಂದು ಹೊಡೆಯಲು ಹೋದರೆ
ಬಡವರ ಮಗನೇನೆ ಹೊಡೆಯಲಿಕ್ಕೆ || 1 ||

ಅಳಿಯನ ವೇಷದಿ ಮಗಳ ಕರೆಯ ಬಂದ
ಕಲಹ ಮಾಡಿ ತಾ ಕಳಿಸೆಂದ
ಒಲುಮೆಯಿಂದಲಿ ತಿಂಗಳೆರಡಿಟ್ಟುಕೊಂಡರೆ
ಗಿಳಿಯಂಥ ಹೆಣ್ಣಿನ ಕೆಡಿಸಿದನೆ ಗೋಪಿ || 2 ||

ಇಷ್ಟೊಂದು ಸಿಟ್ಟೇಕೆ ಚಿಣ್ಣ ಕೃಷ್ಣನ ಮೇಲೆ
ಪುಟ್ಟಿಸಬೇಡಿರೆ ಅನ್ಯಾಯವ
ಸೃಷ್ಟಿಗೊಡೆಯ ನಮ್ಮ ಪುರಂದರ ವಿಠಲನ
ದೃಷ್ಟಿಸಿ ನೋಡಿರೆ ತೊಟ್ಟಿಲಿನೊಳಗೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಜಾಲ** – ಮೋಸ.

**ಮಾನ ತಪ್ಪಿ** – ಮರ್ಯಾದೆಯಿಲ್ಲದೆ.

**ಇಷ್ಟೊಂದು ಸಿಟ್ಟೇಕೆ…** – ಇದು ಯಶೋದೆಯ ಮಾತು, ಗೋಪಿಯರ ದೂರನ್ನು ಕೇಳಿ ಬೇಸತ್ತು, ಇವೆಲ್ಲ ಆಧಾರವಿಲ್ಲದ ದೂರೆಂದೂ, ತನ್ನ ಮಗು ತೊಟ್ಟಿಲಲ್ಲೇ ಮಲಗಿದೆಯೆಂದೂ ಉತ್ತರ ಹೇಳುತ್ತಾಳೆ.

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, yashode, gopi, maga, mane, halu, badava, magalu, olume, gili, hennu, sittu, mosa,
**Pravachana:** NA
**Explanation:** NA